## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

## SPL.C(Electricity) No. 18/2023

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಎಸ್ ಕೆ ಪ್ರಸನ್ನ** | **PW - 12** |
| ತಂದೆಯ ಹೆಸರು | : | **ಎಸ್ ಹೆಚ್. ಕೃಷ್ಣಪ್ಪ** | **CW - 16** |
| ವಯಸ್ಸು | : | **46 ವರ್ಷ** | |
| ವೃತ್ತಿ | : | **ಮುಖ್ಯಪೇದೆ, ಗೋಣಿಕೊಪ್ಪ ಪೊಲೀಸ್ ಠಾಣೆ** | |
| ವಾಸ | : | **ಗೋಣಿಕೊಪ್ಪ, ಪೊನ್ನಂಪೇಟೆ ತಾಲೂಕು** | |

**ಸಾಕ್ಷಿಯನ್ನು ದಿನಾಂಕ 12-03-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ</u>**

1. ನಾನು 2017 ರಿಂದ ಜೂನ್ 2024 ರವರೆಗೆ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಸೇವೆ ಸಲ್ಲಿಸಿರುತ್ತೇನೆ.

2. ದಿನಾಂಕ 10.08.2021 ರಂದು ತನಿಖಾಧಿಕಾರಿಗಳು ನನಗೆ ಈ ಕೇಸಿನಲ್ಲಿ ವಶಪಡಿಸಿಕೊಂಡ ಎರಡು ಸೀಲಾದ ವಸ್ತುಗಳನ್ನು ಕೊಟ್ಟು ಅವುಗಳನ್ನು RFSL ಮೈಸೂರಿಗೆ ಕೊಟ್ಟು ಬರಲು ನನಗೆ ತಿಳಿಸಿದರು, ಅದೇ ದಿನ ನಾನು ಸದರಿ ಎರಡು ಸೀಲಾದ ವಸ್ತುಗಳನ್ನು RFSL ಮೈಸೂರು ರವರಿಗೆ ಕೊಟ್ಟು ಹಿಂಬರಹ ಪಡೆದುಕೊಂಡು ಬಂದು ತನಿಖಾಧಿಕಾರಿಯವರಿಗೆ ಕೊಟ್ಟಿರುತ್ತೇನೆ.

3. ದಿನಾಂಕ 11.08.2021 ರಂದು ತನಿಖಾಧಿಕಾರಿಗಳು ನನಗೆ ಈ ಕೇಸಿನಲ್ಲಿ ವಶಪಡಿಸಿಕೊಂಡ ಒಂದು Solar Fence Energizer ನ್ನು ನನಗೆ ಕೊಟ್ಟು FSL ಬೆಂಗಳೂರಿಗೆ ಪರೀಕ್ಷೆಗಾಗಿ ಕೊಟ್ಟು ಬರಲು ನನಗೆ

ತಿಳಿಸಿದರು, ಅದೇ ದಿನ ನಾನು ಸದರಿ ಒಂದು Solar Fence Energizer ನ್ನು FSL ಬೆಂಗಳೂರು ರವರಿಗೆ ಕೊಟ್ಟು ಹಿಂಬರಹ ಪಡೆದುಕೊಂಡು ಬಂದು ತನಿಖಾಧಿಕಾರಿಯವರಿಗೆ ಕೊಟ್ಟಿರುತ್ತೇನೆ.

**<u>ಪಾಟೀಸವಾಲು- ಆರೋಪಿ ಪರ ವಕೀಲರಾದ ಶ್ರೀ. ಆರ್.ಎಲ್ ರವರಿಂದಃ</u>**

1. ಸೀಲಾದ ವಸ್ತುಗಳು ಠಾಣೆಯಲ್ಲಿ ಇದ್ದವು, ನಾನು ಬೆಂಗಳೂರು FSL ಗೆ ದಿನಾಂಕ 11.08.2021 ರಂದು ಹೋಗಿ Solar Fence Energizer ನ್ನು ಪರೀಕ್ಷೆಗಾಗಿ ಕೊಟ್ಟು ಬಂದಿರುತ್ತೇನೆ. FSL ಮತ್ತು RFSL ರವರು ವಸ್ತುಗಳನ್ನು ಪಡೆದುಕೊಂಡ ಬಗ್ಗೆ ನನಗೆ ಸ್ವೀಕೃತಿಯನ್ನು ಕೊಟ್ಟಿರುತ್ತಾರೆ. ಮೈಸೂರು RFSL ರವರು ನನಗೆ ದಿನಾಂಕ 10.08.2021 ರಂದು, ಬೆಂಗಳೂರಿನ FSL ರವರು ದಿನಾಂಕ 11.08.2021 ರಂದು ಸ್ವೀಕೃತಿಗಳನ್ನು ಕೊಟ್ಟಿರುತ್ತಾರೆ. ನಾನು ಯಾವುದೇ ವಸ್ತುಗಳನ್ನು ಬೆಂಗಳೂರಿನ FSL ಗೆ ತೆಗೆದುಕೊಂಡು ಹೋಗಿ ಪರೀಕ್ಷೆಗಾಗಿ ಕೊಟ್ಟು ಬಂದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಎರಡು ಸೀಲಾದ ವಸ್ತುಗಳನ್ನು ಮೈಸೂರಿನ RFSL ಗೆ ತೆಗೆದುಕೊಂಡು ಹೋಗಿ ಪರೀಕ್ಷೆಗಾಗಿ ಕೊಟ್ಟು ಬಂದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.